# ಬಾಶೋ ಹಾಯ್ಕು

ಮೈಸೂರಿನ ಡಾ. ಸಿ. ರವೀಂದ್ರನಾಥ್ ವೃತ್ತಿಯಿಂದ ವೈದ್ಯರು ಹಾಗೂ ವೈದ್ಯಕೀಯ ಕಾಲೇಜಿನಲ್ಲಿ ಬೋಧಕರು. ಸಾಹಿತ್ಯ ಹಾಗೂ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ಹೊಂದಿರುವ ಅವರಿಗೆ ಕಿರಿದರಲ್ಲಿ ಹಿರಿದನ್ನು ಕಾಣಿಸುವುದರಲ್ಲಿ ವಿಶೇಷ ಆಸಕ್ತಿ. ಈ ಆಸಕ್ತಿಗೆ ನಿದರ್ಶನದ ರೂಪದಲ್ಲಿ ಅವರ ರೇಖಾಚಿತ್ರಗಳನ್ನು ಗಮನಿಸಬಹುದು. ಪ್ರಕೃತಿ ಹಾಗೂ ಮನುಷ್ಯ ಪ್ರಕೃತಿಯ ಚೆಲುವು ಹಾಗೂ ಸಂಕೀರ್ಣತೆಯನ್ನು ರವೀಂದ್ರನಾಥ್ ಅವರು ರೇಖೆಗಳಲ್ಲಿ ಹಿಡಿದಿಡುವ ಕ್ರಮ ವಿಶೇಷವಾದುದು. ಈಗ ರೇಖಾಗಣಿತ ಕಾವ್ಯದ ದಾರಿಯನ್ನು ಆರಿಸಿಕೊಂಡಿದೆ; 'ಬಾಶೋ ಹಾಯ್ಕು'ಗಳ ಅನುವಾದದ ರೂಪದಲ್ಲಿ. ಕನ್ನಡಕ್ಕೆ ಇದೊಂದು ಸ್ವಾಗತಾರ್ಹ ಅನುವಾದ.

ಬಾಶೋ ಜಪಾನಿನ ಓರ್ವ ತತ್ವಜ್ಞಾನಿ. ಕಿಯೋಟೋ ನಗರದ ಕಿನ್ಸುಕು ಮಂದಿರದಲ್ಲಿ ನೆಲೆಸಿದ್ದ ಆತ ಕಾವ್ಯ, ಕ್ಯಾಲಿಗ್ರಫಿಗಳೊಂದಿಗೆ ತತ್ವಶಾಸ್ತ್ರದಲ್ಲಿ ಆಳವಾದ ತಿಳಿವಳಿಕೆ ಹೊಂದಿದ್ದವನು. ಕಾವ್ಯದ ಗಂಭೀರ ವಿದ್ಯಾರ್ಥಿಯೂ ನಿಷ್ಠುರ ವಿಮರ್ಶಕನೂ ಆಗಿದ್ದ ಬಾಶೋ ರಚನೆಗಳಲ್ಲಿ ಆತನ ವ್ಯಕ್ತಿತ್ವದ ನೆಳಲನ್ನೂ ಗುರ್ತಿಸಬಹುದು. ಎಲ್ಲ ಕಾಲಕ್ಕೂ ಎಲ್ಲ ತಲೆಮಾರುಗಳಿಗೂ ರುಚಿಸುವಂತಿರುವ ಬಾಶೋನ ಕಿರುಗವಿತೆಗಳನ್ನು ರವೀಂದ್ರನಾಥ್ ಕನ್ನಡಕ್ಕೆ ತಂದಿದ್ದಾರೆ.

ಏಳೆಂಟು ಪದಗಳಲ್ಲಿ ಹೊಳಹೊಂದನ್ನು ಹಿಡಿದಿಡುವ ಐದುನೂರು ರಚನೆಗಳು 'ಬಾಶೋ ಹಾಯ್ಕು' ಕೃತಿಗಳಲ್ಲಿವೆ. ಒಮ್ಮೆಗೇ ಓದುವುದಕ್ಕಿಂತಲೂ ಬಿಡಿಬಿಡಿಯಾಗಿ ಓದಿಕೊಳ್ಳುವುದರಿಂದ ಇಲ್ಲಿನ ಬಾಶೋ ರಚನೆಗಳು ಹೆಚ್ಚು ರುಚಿಸುತ್ತವೆ. ಕೆಲವು ಉದಾಹರಣೆ ನೋಡಿ:

ಹಳೆಯ ಕೊಳ/ ಕಪ್ಪೆಯೊಂದು ಜಿಗಿಯಿತು/ ಸದ್ದಿನಾಳಕ್ಕೆ ಡುಳುಕ್

ಅರಳಿದ ಜಗದಲ್ಲಿ/ ಅರಳಿದ ಹೂವುಗಳಿಗೆ/ ಬುದ್ಧ ಬುದ್ಧ ಬುದ್ಧ

ಹಾಡುತ್ತಿದೆ ಹಕ್ಕಿ/ ದಿನದಿನಕ್ಕೂ/ ಮಾಗುತ್ತಿದೆ ಮಾವು

ಊರಲ್ಲಿದ್ದೂ/ ಊರಿಗಾಗಿ ಹಂಬಲಿಸುತ್ತಿದೆ/ ಕೋಗಿಲೆ




ವಾಮನಾಕೃತಿಯ ಬಾಶೋ ರಚನೆಗಳ ಸೌಂದರ್ಯವಿರುವುದು ಬಿಡಿಸಿದಷ್ಟೂ ಆವರಿಸಿಕೊಳ್ಳುವ ಅವುಗಳ ಪರಿಮಳದಲ್ಲಿ. ಹಳೆಯ ಕೊಳದಲ್ಲಿ ಕಪ್ಪೆಯೊಂದು ಜಿಗಿಯಿತು ಎನ್ನುವ ಶಬ್ದಚಿತ್ರ ಪೂರ್ಣಗೊಳ್ಳುವುದು 'ಡುಳುಕ್'' ಎನ್ನುವ ಸದ್ದಿನೊಂದಿಗೆ. ಇಲ್ಲಿರುವುದು ನೀರಿನ ಆಳ ಮಾತ್ರವಲ್ಲ, ಅದು ಸದ್ದಿನ ಆಳವೂ ಎನ್ನುತ್ತಾನೆ ಬಾಶೋ. ಸದ್ದಿನ ಕುರಿತು ಮಾತನಾಡುವಂತೆ ಕಾಣಿಸುವ ಈ ರಚನೆ ನಮ್ಮ ಅನುಭವಕ್ಕೆ ತರುತ್ತಿರುವುದು ಮೌನವನ್ನು. ಅರಳಿದ ಹೂವುಗಳು ಬುದ್ಧನನ್ನು ನೆನಪಿಸುವುದು, ಕೋಗಿಲೆಯ ಊರಿನ ಹಂಬಲ, ಹಕ್ಕಿ ಹಾಡಿಗೆ ಮಾವು ಮಾಗುವುದು – ಇವೆಲ್ಲವನ್ನೂ ಬಿಡಿಸಿದಂತೆಲ್ಲ ಕಾವ್ಯದ ಆಳಕ್ಕೆ ನಾವು ಜಿಗಿದಂತಾಗುತ್ತದೆ.

ಬಾಶೋ ರಚನೆಗಳಿಗೆ ಪೂರಕವಾಗಿ ಅನುವಾದಕರೇ ಬಿಡಿಸಿರುವ ರೇಖಾಚಿತ್ರಗಳು ಸಂಕಲನದಲ್ಲಿವೆ. ರೇಖೆ ಹಾಗೂ ಅಕ್ಷರಗಳ ಈ ಜುಗಲಬಂದಿ ಕಾವ್ಯಾಸಕ್ತರಿಗೆ ವಿಶಿಷ್ಟ ಅನುಭವ ನೀಡುವಂತಹದ್ದು. ಬಾಶೋ ಹಾಗೂ ಆತನ ಸಾಹಿತ್ಯದ ಅನನ್ಯತೆಯನ್ನು ಪರಿಚಯಿಸುವ ವಿಸ್ತೃತ ಪರಿಚಯವೊಂದನ್ನು ಅನುವಾದಕರು ನೀಡಿರುವುದು ಉಪಯುಕ್ತವಾಗಿದೆ. ●

**ಬಾಶೋ ಹಾಯ್ಕು** ಕನ್ನಡಕ್ಕೆ: ಡಾ. ಸಿ. ರವೀಂದ್ರನಾಥ್, ಪು: 120; ಬೆ: 150
ಪ್ರ: ಆಕೃತಿ ಪುಸ್ತಕ, ಬೆಂಗಳೂರು. ಫೋನ್: 080 23409479